

ತುರುವೇಕೆರೆ ರವಿಶಂಕರ್
ಕಲೆ: ಗುಜ್ಜಾರ್



# ಯಾರೂ ಕೆಮ್ಮುವ ಹಾಗಿಲ್ಲ...!

ತುಂಬಾ ಹಿಂದೇನೂ ಅಲ್ಲ. ಕೆಲವೇ ವರ್ಷಗಳ ಹಿಂದೆ ಸುಮ್ಮನೆ ಕೆಮ್ಮಿದರೆ ಸಾಕು... ಜನ ಬೆಚ್ಚಿಬೀಳುತ್ತಿದ್ದರು. ಕರೆಂಟು ಹೊಡೆಸಿಕೊಂಡವರಂತೆ ಹಿಂದೆ ಹಾರುತ್ತಿದ್ದರು. ಪಟಕ್ಕನೆ 108 ಅಂಬುಲೆನ್ಸ್‌ಗೆ ಫೋನು ಹಚ್ಚಿ ಬರಮಾಡಿಕೊಳ್ಳುತ್ತಿದ್ದರು. ಇದಕ್ಕೆಂದೇ ತೆರೆಯಲಾಗಿದ್ದ ನೆರವು ಕೇಂದ್ರಗಳಿಗೆ ಫೋನು ಮಾಡಿ ದೂರು ನೀಡುತ್ತಿದ್ದರು. 'ಮೊದಲು ಮಾಸ್ಕ್ ಹಾಕ್ಕಳ್ರೀ ಸ್ವಾಮೀ... ಅಷ್ಟೂ ಗೊತಾಗಲ್ವಾ.. ಹೊರಗೆಲ್ಲೂ ಅಡ್ಡಾಡುವ ಹಾಗಿಲ್ಲ. ಮನೆಯೊಳಗೇ ಇದ್ದು ಕ್ವಾರಂಟೈನ್ ಮಾಡ್ಕಳ್ಳಿ...' ಅಂತ ಸಲಹೆ ನೀಡುತ್ತಿದ್ದರು. ಕರೋನಾ ಎಂಬ ಮಹಾಮಾರಿಯು ಆ ಪರಿಯಾಗಿ ನಮ್ಮನ್ನು ಹೈರಾಣು ಮಾಡಿತ್ತು.

ಕೆಮ್ಮು ಎಂಬುದು ಇವತ್ತಿನದಲ್ಲ. ಮನುಷ್ಯ ಭೂಮಿಗೆ ಬಂದಂದಿನಿಂದಲೂ ಕೆಮ್ಮು ಇದೆ. ಯಾವ ರಾಜ- ಮಹಾರಾಜರುಗಳನ್ನೂ ಅದು ಬಿಟ್ಟಿಲ್ಲ. ನೆಗಡಿ ಮತ್ತು ಕೆಮ್ಮು ಇವೆರಡೂ ಅಣ್ಣ-ತಮ್ಮಂದಿರಿದ್ದಂತೆ. ಕೆಮ್ಮು ಬಂದರೆ ನೆಗಡಿ ಬರಲೇಬೇಕೆಂದೇನಿಲ್ಲ. ಆದರೆ ನೆಗಡಿ ಇದ್ದರೆ ಸೀನು, ಕೆಮ್ಮುಗಳು ನಿಮ್ಮನ್ನು ಆವರಿಸಿಕೊಳ್ಳುವುದು ಮಾತ್ರ ಕಾಯಮ್ಮು. ಈ ಸರ್ವವ್ಯಾಪಿಯಾದ ಕೆಮ್ಮಿನಿಂದ ನೀವು ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನೀವು ಮಾತ್ರವಲ್ಲ, ಯಾರೂ ಅದರಿಂದ ಅಷ್ಟು ಸಲೀಸಾಗಿ ಪಾರಾಗಲಾರರು. ಜೀವನದಲ್ಲೊಂದು ಬಾರಿ ನೆನಪಿಟ್ಟುಕೊಳ್ಳುವ ರೀತಿಯಲ್ಲಿ ಅದು ಎಲ್ಲರನ್ನು ಕಾಡಿಯೇ ಇರುತ್ತದೆ.